ಜೂನ್, ಜುಲೈ ತಿಂಗಳಲ್ಲಿ ಆಗಬೇಕೆಂದು ಸರ್ಕಾರದ ತೀರ್ಮಾನ ಮತ್ತು ಮುಖ್ಯಮಂತ್ರಿಗಳ ಉದ್ದೇಶವೂ ಕೂಡ ಅದೇ ಆಗಿದೆ. ಅದು ಬಂದರೆ, ಸಂಪನ್ಮೂಲಗಳನ್ನು ಕ್ರೋಢೀಕರಿಸುವುದರ ಜೊತೆಗೆ ಕಾನೂನನ್ನು ಒಳ್ಳೆಯ ರೀತಿಯಿಂದ ಜಾರಿಗೆ ತರಬಹುದು. ಯಾವುದೇ ರೀತಿಯಿಂದ ಎಕ್ಸ್‌ಪ್ಲಾಯಿಟ್ ಮಾಡುವುದಕ್ಕೆ ಇದರಲ್ಲಿ ಅವ್ಕಾಶವಿಲ್ಲ ಒಳ್ಳೆಯ ಸದುದ್ದೇಶ ಕೂಡ ಸರ್ಕಾರದ್ದು ಇದೆ. ಆ ದೃಷ್ಟಿಯಿಂದ ಇವತ್ತು ಮೈಸೂರಿನಲ್ಲಿ ಏನು ವಸೂಲಿ ಮಾಡುತ್ತಿದ್ದಾರೆ, ಅದು ಬಹಳ ಜನರಿಗೆ ತೊಂದರೆ ಎನ್ನತಕ್ಕಂಥಾದ್ದು ಅಭಿಪ್ರಾಯ ತಮ್ಮದಾಗಿದ್ದರೆ ಮತ್ತು ತಮ್ಮ ವಿಚಾರವನ್ನು ನಾನು ಒಪ್ಪುವುದಾದರೆ, ಇವತ್ತು ಸದ್ಯಕ್ಕೆ ವಸೂಲಿ ಮಾಡುವುದನ್ನು ಬೇಕಾದರೆ ನಿಲ್ಲಿಸೋಣ. ಸುಮಾರು 3-4 ತಿಂಗಳಾದ ಮೇಲೆ ಸಮಗ್ರವಾಗಿ ಕಾನೂನಿಗೆ ತಿದ್ದುಪಡಿಯನ್ನು ತಂದಾಗ ಮೈಸೂರು ಪಟ್ಟಣ ಕೂಡಿಸಿಕೊಂಡು ಎಲ್ಲಾ ಪಟ್ಟಣಗಳಿಗೆ ಬೇಕಾದರೆ ಅನುಸರಿಸೋಣ. ಸದ್ಯಕ್ಕೆ ತಾತ್ಕಾಲಿಕವಾಗಿ ಆ ಕರ ವಸೂಲಿ ಮಾಡುವುದನ್ನು ನಾನು ನಿಲ್ಲಿಸುತ್ತೇನೆ.

ಶ್ರೀ ಎ. ರಾಮದಾಸ್: ಸರ್ಕಾರ ಹೇಳಿದ್ದನ್ನು ನಾವು ಸ್ವಾಗತ ಮಾಡುತ್ತೇವೆ.

ಅಧ್ಯಕ್ಷರು: ಹಳೇ ಕಂದಾಯವನ್ನು ರೂಲ್ಸ್ ಪ್ರಕಾರ ಕೊಡಿ.

ಶ್ರೀ ಎ. ರಾಮದಾಸ್: ಸರ್ಕಾರಕ್ಕೆ ಅಭಿನಂದನೆಗಳನ್ನು ಸಲ್ಲಿಸುತ್ತೇವೆ. ಅವೈಜ್ಞಾನಿಕವಾಗಿರುವಂತಾದ್ದನ್ನು ತಪ್ಪಿಸುತ್ತೇವೆಂದು ಹೇಳಿದ್ದೀರಿ, ನಾನು ಖಂಡಿತವಾಗಿಯೂ ಸ್ವಾಗತವನ್ನು ಮಾಡುತ್ತೇನೆ. ಅದೇ ಪ್ರಕಾರ ತಾವು ತಕ್ಷಣದಲ್ಲಿಯೇ ಆದೇಶವನ್ನು ಕೊಡಬೇಕು.

ವಿಷಯ(iv): ಶಿರಾ ಪಟ್ಟಣಕ್ಕೆ ಗಾಯಿತ್ರಿ ಜಲಾಶಯದಿಂದ ಕುಡಿಯುವ ನೀರಿನ ಸರಬರಾಜು.

ಶ್ರೀ ಸಿ. ಚೆನ್ನಿಗಪ್ಪ: ಶಿರಾ ಪಟ್ಟಣದ ಕುಡಿಯುವ ನೀರಿನ ಸಮಸ್ಯೆ ಬಗ್ಗೆ ನಿನ್ನೆ ಕೇಳಿದ್ದೆ. ಗಾಯಿತ್ರಿ ಜಲಾಶಯದಿಂದ ಶಿರಾ ಪಟ್ಟಣಕ್ಕೆ ನೀರನ್ನು ಕೊಡುವ ಬಗ್ಗೆ ಉತ್ತರವನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು: ಅದಕ್ಕೋಸ್ಕರವೇ ನಾನು ಹೇಳಿದ್ದು. ಒಂದು ದಿವಸ ರೈಸ್ ಮಾಡುವುದು, ಒಂದು ದಿವಸ ಉತ್ತರ ಕೊಡುವುದು ಬೇಡ. ಒಂದೇ ಸಲ ಉತ್ತರ ಬಂದಮೇಲೆ ರೈಸ್ ಮಾಡಬೇಕು.

ಶ್ರೀ ಸಿ. ಚೆನ್ನಿಗಪ್ಪ: ನಿನ್ನೆ ತಾವೇ ಅವ್ಪಣೆ ಕೊಡಿಸಿದ್ದೀರಿ.

ಅಧ್ಯಕ್ಷರು: ಅದಕ್ಕಾಗಿಯೇ ನಾನು ಹೇಳಿದ್ದು, ನಿನ್ನೆ ರೈಸ್ ಮಾಡುವುದು, ಇವತ್ತು ಉತ್ತರ ಕೇಳುವುದು ಬೇಡ. ಒಂದೇ ಸಲ ಉತ್ತರ ಬಂದಮೇಲೆ ತೆಗೆದುಕೊಳ್ಳೋಣ ಎಂದು.

ಶ್ರೀ ಕೆ.ಎಂ. ಕೃಷ್ಣಮೂರ್ತಿ: ಮಾನ್ಯ ಅಧ್ಯಕ್ಷರೇ, ಆಡಳಿತಾತ್ಮಕ ಅನುಮೋದನೆ ಸಿಕ್ಕಿದೆ ತಾಂತ್ರಿಕ ಅನುಮೋದನೆ ಸಿಕ್ಕಿದೆ, ವರ್ಕ್ ಆರ್ಡರ್ ಸಿಕ್ಕಿದೆ, ಶಿರಾ ಪಟ್ಟಣದಲ್ಲಿ ಕೆಲಸ ಶುರು ಮಾಡಲು ಏನು ತೊಂದರೆ? ಕೆಲಸ ಶುರು ಮಾಡಿ ಸಲ್ಲಿಸಿದ್ದಾರೆ, ಅದರಲ್ಲಿ ಮಂತ್ರಿಗಳ ಕೈವಾಡ ಇದೆ.

ಶ್ರೀ ಬಿ.ಬಿ. ಚಿಮ್ಮನಕಟ್ಟಿ (ಮಾನ್ಯ ನಗರಾಭಿವೃದ್ಧಿ ಸಚಿವರು): ಮಾನ್ಯ ಅಧ್ಯಕ್ಷರೇ, ನಿನ್ನೆಯ ದಿವಸ ಮಾನ್ಯ ಸಿಂಧ್ಯಾರವರು ಮಾನ್ಯ ಚೆನ್ನಿಗಪ್ಪನವರು ಮತ್ತು ಇನ್ನಿತರೆ ಎಲ್ಲಾ ಶಾಸಕರು ಶೂನ್ಯ ವೇಳೆಯಲ್ಲಿ ಈ ವಿಷಯವನ್ನು ಪ್ರಸ್ತಾಪ ಮಾಡಿ ಇದು ಬಹಳ ಗಂಭೀರವಾದ ವಿಷಯವೆಂದು ಹೇಳಿದರು. ಆದಕ್ಕೆ ತಕ್ಷಣ ಉತ್ತರ ಕೊಡಬೇಕೆಂದು ಹೇಳಿ ನಾನು ಕೂಡ ಉತ್ತರವನ್ನು ಸಿದ್ಧಪಡಿಸಿಕೊಂಡು ಬಂದಿದ್ದೇನೆ. ಇದರಲ್ಲಿ ಒಂದು ಅಂಶ ಏನೆಂದರೆ ಇದರಲ್ಲಿ ಯಾವ ಸಚಿವರುಗಳ ಕೈವಾಡವು ಇಲ್ಲ. ಯಾವುದೇ ರೀತಿಯಿಂದ ಅದನ್ನು ನಿಲ್ಲಿಸಬೇಕು ಎನ್ನುವಂತಾದ್ದನ್ನು ಮಾಡಿಲ್ಲ. ಆದಕ್ಕೆ ಸಚಿವರುಗಳ ಕೈವಾಡ ಎನ್ನುವುದನ್ನು ತಾವು ತಳ್ಳಿ ಹಾಕಬೇಕೆಂದು ನಾನು ಹೇಳುತ್ತೇನೆ. ಅಭಿವೃದ್ಧಿ ದೃಷ್ಟಿಯಿಂದ ಕುಡಿಯುವ ನೀರಿನ ವಿಷಯದಲ್ಲಿ ನಮ್ಮ ಸರ್ಕಾರ ಯಾವಾಗಲೂ ಬದ್ಧವಾಗಿದೆ. ನಾನು ಸರ್ಕಾರದ ಪರವಿಯಿಂದ ಈ ಹೇಳಿಕೆಯನ್ನು ಕೊಡಲು ಇಷ್ಟಪಡುತ್ತೇನೆ.

ಶಿರಾ ಪಟ್ಟಣದ ಜನಸಂಖ್ಯೆಯು 1991ರ ಪ್ರಕಾರ 33, 448 ಇದ್ದು, ಹಾಲಿ ಜನಸಂಖ್ಯೆಯು ಸುಮಾರು 40,000 ಇರುತ್ತದೆ.

ಈಗ ಹಾಲೀ ಪಟ್ಟಣದಲ್ಲಿ ಪವರ್ ಪಂಪು ಅಳವಡಿಸಿರುವ 45 ಕೊಳವೆ ಬಾವಿಗಳಿದ್ದು, ಅವುಗಳಿಂದ ಉತ್ಪತ್ತಿಯಾಗುವ ನೀರನ್ನು ತಲಾ ದಿನಂಪ್ರತಿ 35 ಲೀಟರ್‌ನಂತೆ ಸರಬರಾಜು ಮಾಡಲಾಗುತ್ತಿದೆ. ಇಲ್ಲಿನ ನಾಗರೀಕರಿಗೆ ಸಮರ್ಪಕವಾಗಿ ತಲಾ ದಿನಂಪ್ರತಿ 100 ಲೀಟರ್‌ನಂತೆ ನೀರನ್ನು ಸರಬರಾಜು ಮಾಡುವ ಉದ್ದೇಶದಿಂದ ಗಾಯಿತ್ರಿ ಜಲಾಶಯವನ್ನು ಮೂಲವಾಗಿಟ್ಟುಕೊಂಡು 2021ನೇ ಇಸವಿಯಲ್ಲಿ ನಿರೀಕ್ಷಿಸಿರುವ ಸುಮಾರು 90,000 ಜನಸಂಖ್ಯೆಯನ್ನು ಪರಿಗಣಿಸಿ, ಒಂದು ಯೋಜನೆಯನ್ನು ರೂ. 1367.08 ಲಕ್ಷಗಳಿಗೆ ತಯಾರಿಸಿದ್ದು ಅದಕ್ಕೆ ಸರ್ಕಾರದಿಂದ ಸಂಖ್ಯೆ ನೀಆಇ: ಯುಡಬ್ಲ್ಯುಎಸ್ 35:98 ದಿನಾಂಕ 25-2-99 ರಲ್ಲಿ ಆಡಳಿತಾತ್ಮಕ ಅನುಮೋದನೆ ದೊರೆತಿರುತ್ತದೆ. ಈ ಯೋಜನೆಯಡಿಯಲ್ಲಿ ಗಾಯಿತ್ರಿ ಜಲಾಶಯದಿಂದ ಶುದ್ಧೀಕರಣಗಾರದವರೆಗೆ ಹಾಗೂ ಶುದ್ಧೀ ಕರಣಗಾರದಿಂದ ಜಲಸಂಗ್ರಹಾಗಾರಗಳಿಗೆ 406 ಮಿಮಿ ವ್ಯಾಸದ ಎಂ.ಎಸ್. ಕೊಳವೆ ಮಾರ್ಗವನ್ನು ಹಾಕಲು ಮೆ। ಭೂರತ್ನಂ ಅಂಡ್ ಕಂ. ಹೈದರಾಬಾದ್ ಇವರಿಗೆ ಟೆಂಡರ್ ಆಧಾರದ ಮೇಲೆ ದಿನಾಂಕ 30-8-99 ರಲ್ಲಿ ವಹಿಸಿಕೊಡಲಾಗಿತ್ತು. ಆದರೆ ಸ್ಥಳೀಯರು ಕಾರ್ಯನಿರ್ವಹಿಸಲು ಅಡಚಣೆ ಉಂಟು ಮಾಡಿದ್ದರಿಂದ ಕೆಲಸ ಪ್ರಾರಂಭವಾಗಲಿಲ್ಲ. ದಿನಾಂಕ 3-12-99 ರಂದು ಮಾನ್ಯ ಬೃಹತ್ ಮತ್ತು ಮಧ್ಯಮ ನೀರಾವರಿ ಮಂತ್ರಿಗಳು ಹಾಗೂ ಚಿತ್ರದುರ್ಗ ಜಿಲ್ಲೆಯ ಮಾನ್ಯ ಜಿಲ್ಲಾ ಮಂತ್ರಿಗಳು ಗಾಯಿತ್ರಿ ಜಲಾಶಯಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ ಗಾಯಿತ್ರಿ ಜಲಾಶಯದ ಅಚ್ಚುಕಟ್ಟಿನ ರೈತರುಗಳು ಮಾನ್ಯ ಮಂತ್ರಿಗಳಿಗೆ ಮನವಿಯನ್ನು ಸಲ್ಲಿಸಿ ಜಲಾಶಯದಲ್ಲಿರುವ ನೀರು ಇರುವ ಅಚ್ಚುಕಟ್ಟಿಗೆ ಸಾಲದೆ ಇರುವುದರ ಪ್ರಯುಕ್ತ ಶಿರಾ ಪಟ್ಟಣಕ್ಕೆ ಕುಡಿಯುವ ನೀರಿಗೆ ಅನುಮತಿಯನ್ನು ಕೊಡಕೂಡದೆಂದು ಮನವಿ ಮಾಡಿರುವ ಹಿನ್ನೆಲೆಯಲ್ಲಿ ಮಾನ್ಯ ಮಂತ್ರಿಗಳು ಕುಡಿಯುವ ನೀರು ಸರಬರಾಜಿಗೆ ಬೇರೆ ಮೂಲವನ್ನು ಪರಿಶೀಲಿಸಲು ಸೂಚಿಸಿರುತ್ತಾರೆ. ಅವರುಗಳ ಸೂಚನೆಯ ಮೇರೆಗೆ ಹೇಮಾವತಿ ನಾಲೆಯನ್ನು

ಮೂಲವಾಗಿಟ್ಟುಕೊಂಡು 0.9 ಟಿ.ಎಂ.ಸಿ. ನೀರನ್ನು ಪಡೆದು ರೂ. 1320.00 ಲಕ್ಷಗಳಿಗೆ ಅಂದಾಜನ್ನು ತಯಾರಿಸಲಾಗಿದೆ.

ಸರ್ಕಾರದಿಂದ ಅನುಮೋದನೆಗೊಂಡ ಯೋಜನೆಯಂತೆ ಗಾಯಿತ್ರಿ ಜಲಾಶಯ ಮೂಲದಿಂದ ಶಿರಾ ಪಟ್ಟಣಕ್ಕೆ ನೀರು ಸರಬರಾಜು ಮಾಡುವ ಯೋಜನೆಯಡಿ ಕಾಮಗಾರಿಯನ್ನು ಪ್ರಾರಂಭಿಸಲಾಗಿ, ದಿನಾಂಕ 14-3-2001 ರಂದು ಅಲ್ಲಿನ ಸುತ್ತಮುತ್ತಲಿನ ರೈತರು ಕೆಲಸಕ್ಕೆ ಅಡಚಣೆ ಉಂಟುಮಾಡಿ, ಜೆ.ಸಿ.ಬಿ. ಸುಡುವುದಾಗಿ ತಿಳಿಸಿ, ಕೆಲಸಗಾರರಿಗೆ ಪ್ರಾಣ ಭಯ ಒಡ್ಡಿರುತ್ತಾರೆ. ಈ ಹಿನ್ನೆಲೆಯಲ್ಲಿ ಸದರೀ ಕಾಮಗಾರಿಯು ಸ್ಥಗಿತಗೊಂಡಿರುತ್ತದೆ. ಅಚ್ಚುಕಟ್ಟು ಪ್ರದೇಶದಲ್ಲಿನ ರೈತರ ಹಿತರಕ್ಷಣೆಗಳನ್ನು ಕಾಪಾಡುವ ಸಲುವಾಗಿ ಹಾಗೂ ಕಡಿಮೆ ನಿರ್ವಹಣಾ ವೆಚ್ಚದ ಯೋಜನೆಯಾದ ಹೇಮಾವತಿ ಯೋಜನೆಯನ್ನು ಮಂಜೂರು ಮಾಡಲು ಕ್ರಮವನ್ನು ಕೂಡಲೇ ಸರ್ಕಾರ ಕೈಗೊಳ್ಳಲಾಗುವುದು.

ಶ್ರೀ ಸಿ. ಚೆನ್ನಿಗಪ್ಪ: ಮಾನ್ಯ ಅಧ್ಯಕ್ಷರೇ, ಹಿಂದಿನ ಸರ್ಕಾರವಿದ್ದಾಗ 5 ಕೋಟಿ ರೂಪಾಯಿಗಳು ಮಂಜೂರಾಗಿತ್ತು. ಕೆಲಸ ಶುರು ಆಗಿದೆ. ಸುಮಾರು 20 ಪರ್ಸೆಂಟ್ ಕೆಲಸ ಆಗಿದೆ. ಶಿರಾ ಪಟ್ಟಣದಲ್ಲಿ ಸುಮಾರು 45 ಸಾವಿರ ಜನಸಂಖ್ಯೆ ಇದೆ. ಇಂತಹ ಒಂದು ಪಟ್ಟಣಕ್ಕೆ ಕುಡಿಯುವ ನೀರನ್ನು ಕೊಡುವ ಜವಾಬ್ದಾರಿ ಸರ್ಕಾರದ್ದು. ಈ ಮಧ್ಯೆ ರಾಜಕೀಯ ಬೆರೆಸಿ, ರೈತರನ್ನು ಎತ್ತಿಕ್ಕಿ ಮಾಡುವಂತಹ ಕೆಲಸ ಸರಿಯಲ್ಲ. ಅಲ್ಲಿನ ರೈತರು ಯಾರೂ ಕೇಳುವುದಕ್ಕೆ ಹೋಗಲಿಲ್ಲ. ಇಲ್ಲಿ ಇಬ್ಬರು ಮಾನ್ಯ ಶಾಸಕರು ಮತ್ತು ಮಂತ್ರಿಗಳು ಸರ್ಕಾರಕ್ಕೆ ಪತ್ರ ಬರೆದು ಈ ಕಾಮಗಾರಿಯನ್ನು ನಿಲ್ಲಿಸಿ ಎಂದು ಹೇಳಿದ್ದಾರೆ. ಇದು ಯಾವ ನ್ಯಾಯ? ದಯಮಾಡಿ ಸರ್ಕಾರ ಮತ್ತು ಮಾನ್ಯ ಮುಖ್ಯ ಮಂತ್ರಿಗಳು ಏನು ಘೋಷಣೆ ಮಾಡಿದ್ದಾರೆ, ಕುಡಿಯುವ ನೀರಿಗೆ ನಮ್ಮ ಸರ್ಕಾರ ಆದ್ಯತೆ ಕೊಡುತ್ತದೆ ಎಂದು ಆ ಪ್ರಕಾರ ಶಿರಾ ನಗರವಾಸಿಗಳಿಗೆ ಕುಡಿಯುವ ನೀರನ್ನು ಕೊಡಲು ಸರ್ಕಾರ ಮುಂದಾಗಬೇಕು. ಆ ಕಾಮಗಾರಿಯನ್ನು ತಕ್ಷಣ ಕೂಡಲೇ ಪ್ರಾರಂಭಿಸಬೇಕೆಂದು ನಾನು ತಮ್ಮ ಮೂಲಕ ಮಾನ್ಯ ಮಂತ್ರಿಗಳಲ್ಲಿ ಪ್ರಾರ್ಥಿಸುತ್ತೇನೆ.

ಶ್ರೀ ಕೆ.ಎಂ. ಕೃಷ್ಣಮೂರ್ತಿ: ಶಿರಾ ಪಟ್ಟಣದಲ್ಲಿ ನೀರಿನ ಭವಣೆ ಮಾನ್ಯ ಮಂತ್ರಿಗಳಿಗೆ ಗೊತ್ತಿರಬಹುದು. ಮಾನ್ಯ ಮಂತ್ರಿಗಳು ಏತಕ್ಕೋಸ್ಕರ ಆ ಕಾಮಗಾರಿಯನ್ನು ನಿಲ್ಲಿಸಿ ಎಂದು ಪತ್ರ ಬರೆದರು ಎನ್ನುವ ಬಗ್ಗೆ ಈ ಸಭೆಯಲ್ಲಿ ಸ್ಪಷ್ಟೀಕರಣ ಕೊಡಬೇಕು.

ಶ್ರೀ ಪಿ.ಜಿ.ಆರ್. ಸಿಂಧ್ಯಾ: ಮಾನ್ಯ ಅಧ್ಯಕ್ಷರೇ, ಮಾನ್ಯ ಅರಣ್ಯ ಸಚಿವರಾದ ಶ್ರೀ ಕೆ.ಎಚ್. ರಂಗನಾಥ್ ಅವರು ಒಂದು ಪತ್ರವನ್ನು ಬರೆದಿದ್ದಾರೆ. ಅದೇ ರೀತಿ ಬೇರೊಬ್ಬ ಮಂತ್ರಿಗಳು ಸಹ ಪತ್ರ ಬರೆದಿದ್ದಾರೆ. ಮತ್ತು ಅಲ್ಲಿನ ಎಂ.ಎಲ್.ಎ. ರವರು ಪತ್ರ ಬರೆದಿದ್ದಾರೆ. ಅದರಲ್ಲಿ ನಾವು ತಪ್ಪು ಕಂಡು ಹಿಡಿಯುವ ಅವಶ್ಯಕತೆ ಇಲ್ಲ. ಮುಖ್ಯವಾಗಿ ಕುಡಿಯುವ ನೀರನ್ನು ಶಿರಾ ನಗರಕ್ಕೆ ಕೊಡಬೇಕು. ಅಲ್ಲಿನ ಜನರು ಹಾಹಾಕಾರದಲ್ಲಿದ್ದಾರೆ. ನಾನು ತಮಗೆ ಸಲಹೆ ಮಾಡಿದ್ದು ಏನೆಂದರೆ ಅಲ್ಲಿ ಕೆಲವು ಜನ ರೈತರು ಧರಣಿ ಮಾಡುತ್ತಿದ್ದಾರೆ. ಆ ಧರಣಿಯನ್ನು ನಿಲ್ಲಿಸುವುದಕ್ಕೆ ತಾವು ಮನವಿ ಮಾಡಿಕೊಂಡು ಅವರನ್ನು ಕರೆಸಿ ಮಾತುಕತೆ ಮಾಡಿ ಸಂಧಾನದ ಮೂಲಕ ಬಗೆಹರಿಸಿ.

ಶ್ರೀ ಬಿ.ಬಿ. ಚಿಮ್ಮನಕಟ್ಟಿ: ಮಾನ್ಯ ಅಧ್ಯಕ್ಷರೇ, ಮಾನ್ಯ ಸಿಂಧ್ಯಾರವರ ಅಭಿಪ್ರಾಯವನ್ನು ಒಪ್ಪುತ್ತೇನೆ. ಕುಡಿಯುವ ನೀರಿನ ವಿಷಯದಲ್ಲಿ ನಾವ್ಯಾರೂ ರಾಜಕೀಯ ಮಾಡುವುದು ಬೇಕಾಗಿಲ್ಲ. ಮಾಡುವ ಅವಶ್ಯಕತೆಯು ಇಲ್ಲ. ಒಟ್ಟಾರೆ ಶಿರಾ ಜನರಿಗೆ ಕುಡಿಯುವ ನೀರು ಆಗಬೇಕು. ಅದಕ್ಕೆ ನಾವು ಶಾಶ್ವತವಾದ ಒಂದು ಪರಿಹಾರವನ್ನು ಕಂಡುಹಿಡಿಯಬೇಕೇ ಹೊರತು ಅದನ್ನೇ ಒಂದು ಬೃಷ್ಟಿ ಇಟ್ಟುಕೊಂಡು ಬೇರೆ ರೀತಿಯಾದ ನೋಡುವುದಾದರೆ ಯಾವ ಕಾಮಗಾರಿಯನ್ನು ಕಾರ್ಯಗತಗೊಳಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಈ ಯೋಜನೆ 1999ರಲ್ಲಿ ಮಂಜೂರಾತಿಯಾಗಿದ್ದರೂ ಇದುವರೆಗೂ ಕೆಲಸ ಪ್ರಾರಂಭವಾಗದೇ ಇರುವುದಕ್ಕೆ ಕಾರಣವೇನು? ಅಡೆತಡೆ. ಇವತ್ತು ಗಾಯಿತ್ರಿ ಜಲಾಶಯದ ರೈತರು ಅಡೆತಡೆ ಮಾಡುತ್ತಾರೆ. ನಮ್ಮ ಅಚ್ಚುಕಟ್ಟು ಪ್ರದೇಶದಲ್ಲಿರತಕ್ಕಂಥ ರೈತರಿಗೆ ನೀರು ಸಾಕಾಗುವುದಿಲ್ಲ ನಮಗೆ ಬಹಳ ಅನ್ಯಾಯವಾಗುತ್ತದೆ, ನಮ್ಮ ಬೆಳೆಗೆ ಅನ್ಯಾಯವಾಗುತ್ತದೆಂದು ಹೇಳುತ್ತಾರೆ. ಅವರು ಸಹ ಈಗ ಉಪವಾಸ ಸತ್ಯಾಗ್ರಹ ಮಾಡುತ್ತಿದ್ದಾರೆ. ಅದೇ ರೀತಿಯಲ್ಲಿ ಶಿರಾ ಪಟ್ಟಣದಲ್ಲಿರತಕ್ಕಂಥ ನಾಗರೀಕರು ಸಹ ನಮಗೆ ನೀರು ಬೇಕು ಅಂತ ಉಪವಾಸ ಸತ್ಯಾಗ್ರಹ ಮಾಡುತ್ತಿದ್ದಾರೆ. ಈ ಸಂದರ್ಭದಲ್ಲಿ ಸರ್ಕಾರದವರು ಒಂದು ನ್ಯಾಯಯುತವಾದ ನಿರ್ಣಯವನ್ನು ಎರಡೂ ಪಾರ್ಟಿಗಳಿಗೆ ಸೂಕ್ತವಾಗಿರತಕ್ಕಂಥ ಒಂದು ಸೂತ್ರವನ್ನು ಕಂಡು ಹಿಡಿದು ಮಾಡಬೇಕಾದುದು ಅತಿ ಅವಶ್ಯಕ ಇದೆ. ಆ ದೃಷ್ಟಿಯಿಂದ ನಾನೂ ಆಲೋಚನೆ ಮಾಡಿದ್ದೇನೆ. ಇವತ್ತು ವೈಯಬಿಲಿಟಿ ಸಹ ಬೇಕಾಗುತ್ತದೆ. ಇವತ್ತು ಗಾಯಿತ್ರಿ ಜಲಾಶಯದ ನೀರಿನ ಮಟ್ಟ ನೋಡಬೇಕಾಗುತ್ತದೆ. ಇವತ್ತು ಜಲಾಶಯವೇ ಕೆಲವು ಸಲ ಬತ್ತಿ ಹೋಗುತ್ತದೆ. ಅದು ಒಂದು ಪರ್ಮನೆಂಟ್ ಸಲ್ಯೂಶನ್ ಆಗದೇ ಹೋಗಬಹುದು. ಆ ದೃಷ್ಟಿಯಿಂದ ಇವತ್ತು ಹೇಮಾವತಿ ನದಿಯಿಂದ ನೀರಾವರಿ ಇಲಾಖೆಯವರೇ ನೀರು ಕೊಟ್ಟಾಗ ಅನುಕೂಲವಾಗಬಹುದು. ಇವತ್ತು ಚಿಕ್ಕನಾಯಕನಹಳ್ಳಿಗೆ ಕೊಟ್ಟಿದ್ದಾರೆ, ತುರುವೇಕೆರೆಗೆ ಕೊಟ್ಟಿದ್ದಾರೆ. ಗುಬ್ಬಿ ಪಟ್ಟಣಕ್ಕೆ ಕೊಟ್ಟಿದ್ದಾರೆ, ಅದೇ ರೀತಿಯಲ್ಲಿ ಇವತ್ತು ಶಿರಾ ಪಟ್ಟಣಕ್ಕೂ ಕೂಡ ಕುಡಿಯುವ ನೀರನ್ನು ಕೊಡಲು ಸಮ್ಮತಿ ನೀಡಿ ಆದೇಶ ನೀಡಿದಾಗ ಆ ಹೇಮಾವತಿ ಜಲಾಶಯದಿಂದ ಕೆನಲ್ ಮೂಲಕ ನೀರನ್ನು ತೆಗೆದುಕೊಂಡರೆ ಒಂದು ಪರ್ಮನೆಂಟ್ ಸೆಲ್ಯೂಶನ್ ಆಗುತ್ತದೆ. ಇವತ್ತು ಸುಮಾರು 25 ಕಿಲೋಮೀಟರ್‌ವರೆಗೂ ಪೈಪ್‌ಲೈನ್ ಮಾಡಿ ಶಿರಾ ಪಟ್ಟಣಕ್ಕೆ ತೆಗೆದುಕೊಂಡು ಹೋಗಬೇಕು. ಆದರೆ ನಿರ್ವಹಣೆ ವೆಚ್ಚ ಸಹ ಬಹಳ ದುಬಾರಿಯಾಗುತ್ತದೆ. ಇದನ್ನೆಲ್ಲಾ ಸರ್ಕಾರ ಗಮನದಲ್ಲಿಟ್ಟುಕೊಂಡು ಕುಡಿಯುವ ನೀರಿನ ಯೋಜನೆ ಶಾಶ್ವತವಾಗಿ ಆಗಬೇಕು, ಮತ್ತು ಅದು ಆದಷ್ಟು ಬೇಗ ಆಗಬೇಕೆಂಬುದನ್ನು ನಾನು ಕೂಡ ಗಮನದಲ್ಲಿಟ್ಟುಕೊಂಡು ಸಾಧ್ಯವಾದರೆ 2-3 ತಿಂಗಳಲ್ಲಿಯೇ ಕಾಮಗಾರಿಯನ್ನು ಪ್ರಾರಂಭ ಮಾಡುವುದಕ್ಕೆ ನಾನು ಸಹ ಪ್ರಯತ್ನ ಮಾಡುತ್ತೇನೆ. ಮತ್ತು ಇವತ್ತು ರೈತರು ಏನು ಉಪವಾಸ ಸತ್ಯಾಗ್ರಹ ಮಾಡುತ್ತಿದ್ದಾರೆ ಅವರಿಗೆ ನಾನು ಸರ್ಕಾರದ ವತಿಯಿಂದ ಮನವಿ ಮಾಡುತ್ತೇನೆ, ರೈತರು ಯಾವುದೇ ಅಹಿತಕರವಾದ ಘಟನೆಗಳಿಗೆ ಆಸ್ಪದ ಮಾಡಿಕೊಡಬಾರದು, ರೈತರು ಸರ್ಕಾರದ ಜೊತೆ ಸ್ಪಂದನೆ ಮಾಡಬೇಕೆಂದು ಹೇಳಿ ನಾನು ಸದನದ ಮೂಲಕ ಕೇಳಿಕೊಳ್ಳುತ್ತೇನೆ.